**ದಿನಾಂಕಃ 31-01-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆ: ಅರ್ಜಿದಾರರ ಪರ ವಕೀಲರಾದ ಶ್ರೀ.ಪಿ.ವಿ.ಕೆ ವಕೀಲರಿಂದಃ**

| | | |
|---|---|---|
| ನಿ.ಪಿ-27 | : | ನನ್ನ ಅಂಗನ್ಯೂನ್ಯತೆ ಪ್ರಮಾಣ ಪತ್ರ, |
| ನಿ.ಪಿ-28 ರಿಂದ 31 | : | ಒಟ್ಟು 4 ಭಾವಚಿತ್ರಗಳು ಕ್ರಮವಾಗಿ, |
| ನಿ.ಪಿ-32 | : | ಒಂದು ಸಿಡಿ, |

ಎಂದು ಗುರುತಿಸಲಾಯಿತು.

ಅರ್ಜಿಯಲ್ಲಿ ಕೋರಿ ಕೊಂಡಂತೆ ಆದೇಶ ಆಗಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

**ಪಾಟೀ ಸವಾಲುಃ** 1 ನೇ ಎದುರುದಾರರ ಪರ ವಕೀಲರಾದ ಶ್ರೀ.ಪಿ.ಬಿ.ಜಿ ವಕೀಲರನ್ನು ಪದೇ-ಪದೇ ಕೂಗಿ ಕರೆಯಿಸಲಾಗಿ, ಗೈರು ಹಾಜರು ಇರುವುದರಿಂದ ಪಾಟೀ ಸವಾಲು ಇಲ್ಲಾ ಎಂದು ತೆಗೆದುಕೊಳ್ಳಲಾಯಿತು .

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ.ವಿ.ಎಸ್.ಎ.ವಕೀಲರಿಂದಃ**

ಅಪಘಾತದ ಸಮಯದಲ್ಲಿ ನನಗೆ 26 ವರ್ಷ ವಯಸ್ಸು ಆಗಿತ್ತು ಎಂದರೆ ಸಾಕ್ಷಿ 21 ವರ್ಷ ಆಗಿತ್ತು ಎಂದು ಹೇಳುತ್ತಾರೆ. ನನಗೆ ಯಾವುದೇ ರೇಶನ ಕಾರ್ಡ ಇರುವುದಿಲ್ಲ. ಅಪಘಾತಕ್ಕಿಂತ ಮೊದಲು ನಾನು ಕೋಳಿ ಫಾರಂ ನಡೆಸುತ್ತಿದ್ದೆ ಅಪಘಾತವಾದ ನಂತರ ಕೋಳಿ ಫಾರಂ ಮುಚ್ಚಿರುತ್ತೇನೆ. ಗುಜರಿ ವ್ಯವಹಾರವನ್ನು ರಾಣೇಬೆನ್ನೂರಿನಲ್ಲಿ ಮಾಡುತ್ತಿದ್ದೇನು. ಗುಜರಿ ವ್ಯವಹಾರ ಮತ್ತು ಕೋಳಿ ಫಾರಂ ವ್ಯವಹಾರ ನಡೆಸುತ್ತಿದ್ದ ಬಗ್ಗೆ ದಾಖಲೆಯನ್ನು ಹಾಜರು ಪಡಿಸಿರುತ್ತೇನೆ. ಆ ರೀತಿಯ ಯಾವುದೇ ದಾಖಲೆ ನ್ಯಾಯಾಲಯದ ಕಡತದಲ್ಲಿ ಇರುವುದಿಲ್ಲ ಎಂದರೆ ಸರಿ. ಪ್ರತಿ ತಿಂಗಳು ಐದು ಲಕ್ಷ ಆದಾಯ ಇತ್ತು ಎನ್ನುವ ಬಗ್ಗೆ ಯಾವುದೇ ದಾಖಲೆ ಹಾಜರು ಪಡಿಸಿರುವುದಿಲ್ಲ. ನನಗೆ ತಿಂಗಳು ಐದು ಲಕ್ಷ ಆದಾಯ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಅಪಘಾತದ ದಿನ ಕಾರ್ ನ್ನು ನಾನೇ ನಡೆಸುತ್ತಿದ್ದೆ. ಕಾರ್ ನನ್ನ ಸ್ನೇಹಿತನದ್ದಾಗಿತ್ತು. ನನಗೆ ಕಾರ್ ನಡೆಸಲು ಚಾಲನಾ ಪರವಾನಿಗೆ ಇರುತ್ತದೆ. ಆ ಕಾರಿಗೆ ವಿಮೆ ಇರಲಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ.

ಅಪಘಾತವಾದಾಗ ಅಂದಾಜು ರಾತ್ರಿ 7.00 ರಿಂದ 8.00 ಗಂಟೆಯಾಗಿತ್ತು. ನಿಂತ ಲಾರಿಗೆ ನಾನೇ ಹೋಗಿ ಡಿಕ್ಕಿ ಪಡಿಸಿ ಅಪಘಾತ ಮಾಡಿರುತ್ತೇನೆ ಎಂದು ಪೊಲಿಸರು ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತಾರೆ ಎಂದರೆ ಸರಿ. ಪೊಲಿಸರು ದೋಷಾರೋಪಣಾ ಪಟ್ಟಿಯಲ್ಲಿ ನಾನೇ ವಾಹನವನ್ನು ಅತೀ ವೇಗ ಮತ್ತು ಅಜಾಗರೂಕತೆಯಿಂದ ಚಲಾಯಿಸಿಕೊಂಡು ಬರುತ್ತಿದ್ದೆ ಎಂದು ನಮೂದಿಸಿರುತ್ತಾರೆ ಎಂದರೆ ಸರಿ. ಪೋಲಿಸ್ ದಾಖಲೆಯ ಪ್ರಕಾರ ಅಪಘಾತ ಸಂಪೂರ್ಣ ನನ್ನ ತಪ್ಪಿನಿಂದಲೇ ಆಗಿರುತ್ತದೆ ಎಂದರೆ ಸಾಕ್ಷಿ ದೋಷಾರೋಪಣಾ ಪಟ್ಟಿ ಸರಿ ಇಲ್ಲ ಎಂದು ಕೇಸ್ ನಡೆಸುತ್ತಿದ್ದೇನೆ ಎಂದು ಹೇಳುತ್ತಾರೆ. ಆ ಕೇಸು ಚಾಲ್ತಿಯಲ್ಲಿರುವ ಬಗ್ಗೆ ಯಾವುದೇ ದಾಖಲೆ ಹಾಜರು ಪಡಿಸಿಲ್ಲ ಎಂದರೆ ಸರಿ. ಅಪಘಾತ ನನ್ನ ತಪ್ಪಿನಿಂದ ಆಗಿರುವುದರಿಂದ ಪರಿಹಾರ ಬರುವುದಿಲ್ಲ ಎಂದು ಅಪಘಾತ ಲಾರಿ ಚಾಲಕನ ತಪ್ಪಿನಿಂದ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಅಪಘಾತದಲ್ಲಿ ನನ್ನ ಮುಖದ ಎಲುಬು ಮುರಿದಿರುತ್ತದೆ. ಅಪಘಾತವಾದ ತಕ್ಷಣ ನನ್ನನ್ನು ಓಂ ಆಸ್ಪತ್ರೆಗೆ ಕರೆದು ಕೊಂಡು ಹೋಗಿರುತ್ತಾರೆ. ಓಂ ಆಸ್ಪತ್ರೆಯಲ್ಲಿ ನನ್ನನ್ನು ಅಡ್ಮಿಟ್ ಮಾಡಿಕೊಂಡಿರುವುದಿಲ್ಲ ನಂತರ ನನ್ನನ್ನು ಹುಬ್ಬಳ್ಳಿಯ ಬಾಲಾಜಿ ಆಸ್ಪತ್ರೆಗೆ ಕರೆದು ಕೊಂಡು ಹೋಗಿರುತ್ತಾರೆ. ಅಪಘಾತದಲ್ಲಿ ನಾನು ಹೇಳಿದಂತೆ ಯಾವುದೇ ಗಾಯವಾಗಿಲ್ಲ ಎಂದರೆ ಸರಿಯಲ್ಲ. ನನಗೆ ಅನುಕೂಲವಾಗಲಿ ಎಂದು ನಿಪಿ-10 , ನಿಪಿ-12 ರಿಂದ 18 ದಾಖಲೆಗಳನ್ನು ಸೃಷ್ಟಿ ಮಾಡಿ ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಈಗ ಡ್ರೈವಿಂಗ್ ಮಾಡುವುದಿಲ್ಲ. ಕಣ್ಣಿನ ತೊಂದರೆ ಇರುವುದರಿಂದ ಡ್ರೈವಿಂಗ್ ಮಾಡಲು ಆಗುವುದಿಲ್ಲ. ನನಗೆ ಕಣ್ಣಿನ ಸಮಸ್ಯೆ ಇರುವುದರಿಂದ ಡ್ರೈವಿಂಗ್ ಮಾಡಲು ಆಗುವುದಿಲ್ಲ ಎಂದು ನನ್ನ ಡಿ.ಎಲ್ ನ್ನು ಆರ್.ಟಿ.ಓ ರವರಿಗೆ ಸರೆಂಡರ ಮಾಡಿಲ್ಲ ಎಂದರೆ ಸಾಕ್ಷಿ ಇನ್ನೂ ಚಿಕಿತ್ಸೆ ನಡೆಯುತ್ತಿದ್ದೆ ಎಂದು ಹೇಳುತ್ತಾರೆ. ನಾನು ಇವತ್ತಿಗೂ ಡ್ರೈವಿಂಗ್ ಮಾಡುತ್ತಿರುವುದರಿಂದ ಡಿ.ಎಲ್ ನನ್ನ ಬಳಿಯೇ ಇಟ್ಟುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಆ ಕಾರಣದಿಂದ ನನಗೆ ಯಾವುದೇ ಅಂಗನ್ಯೂನ್ಯತೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಅನುಕೂಲವಾಗಲಿ ಎಂದು ನಿಪಿ-27 ನ್ನು ಸೃಷ್ಠಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಅಪಘಾತ ಸಂಪೂರ್ಣ ನನ್ನ ತಪ್ಪಿನಿಂದಲೇ ಆಗಿರುವುದರಿಂದ 2 ನೇ ಎದುರುದಾರರು

ಯಾವುದೇ ಪರಿಹಾರ ಕೊಡಲು ಬಾದ್ಯರಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಏನೂ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ. ಹೇ. ಕೇ. ಸರಿ ಇದೆ.

2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ ರಾಣೇಬೆನ್ನೂರು.